ಮಗಳು ಸ್ಲೇಟು, ಬಳಪ ಹಿಡಿದು ಅಣ್ಣನ ಜತೆಗೆ ನನ್ನನ್ನೂ ಶಾಲೆಗೆ ಸೇರಿಸಬೇಕೆಂದು ಅಪ್ಪನೊಂದಿಗೆ ಜಗಳಕ್ಕೆ ನಿಂತಳು. ಆ ಸ್ಲೇಟೂ, ಬಳಪ ಕಂಡರೆ ಅನಸೂಯಾಳಿಗೆ ಬಲು ಇಷ್ಟ. ಯಾವಾಗಲೂ ಮಗಳ ಸ್ಲೇಟನ್ನು ಎದೆಗೆ ಒತ್ತಿಕೊಂಡು ಮುತ್ತು ಕೊಡುತ್ತಿದ್ದಳು. ಇಲ್ಲಿಯ ತನಕ ಗಂಡನ ಎದುರಿಗೆ ನಿಂತು ಅವಳು ಮಾತನಾಡಿದ್ದೇ ಇಲ್ಲ. ಅವನನ್ನು ಕಂಡರೆ ಸಾಕು ಬೆನ್ನಿನಲ್ಲಿ ನಡುಕ ಹುಟ್ಟಿ ಬೆನ್ನು ಬಾಗಿ ದೇಹವೇ ಕುಸಿದು ಬೀಳ್ತಾ ಇತ್ತು. ಈಗೀಗ ಅನಸೂಯಾಳ ದೇಹ ಬೆಳ್ಳಗೆ ಪೇಲವವಾಗಿಬಿಟ್ಟಿತ್ತು. ತಲೆಯ ಜತೆಗೆ ಬೆನ್ನು ಕೂಡಾ ನಿಲ್ಲುತ್ತಿಲ್ಲ. ಹಿಟ್ಟಿನಿಂದ ಮಾಡಿದ ಬೊಂಬೆಯ ಹಾಗೆ ಕಾಣ್ತಾ ಇದ್ದಳು. ಸೂರ್ಯನ ಬೆಳಕು ಕಾಣದಿರುವುದೇ ಕಾಯಿಲೆಗೆ ಕಾರಣವೆಂದೂ, ಮನೆಗೆ ಒಂದು ಕಿಟಕಿ ಮಾಡಿಸಿ, ಅದರ ಎದುರಿಗೆ ಮಂಚ ಹಾಕಿಸಬೇಕೆಂದೂ ಡಾಕ್ಟರು ಹೇಳಿದ. ಅನಸೂಯ ಹಾಗೆ ಮಂಚಕ್ಕೆ ಬೀಳುವ ಕಾಲಕ್ಕೆ ಕೃಷ್ಣವೇಣಿಗೆ ಹನ್ನೆರಡರ ವಯಸ್ಸು. ಏಳನೇ ತರಗತಿಗೆ ಬಂದಿದ್ದಳು. ಅನಸೂಯಾಳ ರಕ್ತದಲ್ಲಿ ಒಂದೇ ಒಂದು ಕೆಂಪು ರಕ್ತಕಣ ಇಲ್ಲವೆಂದು ಡಾಕ್ಟರು ಹೇಳಿದ್ದರು. ಅನಸೂಯಾಳಿಗೆ ಈಗ ಅರ್ಥವಾಯಿತು. ದಿನಾಲೂ ಸಂಜೆ ಆಯಾಸವಾದಾಗ ಹಿತ್ತಿಲಿನ ತಣ್ಣನೆಯ ಗಾಳಿಗೆ ಕೂತು ಸೆರಗಿನಿಂದ ಹಣೆ ಒರೆಸಿಕೊಂಡಾಗ ಸೆರಗು ಕೆಂಪೇರತಾ ಇತ್ತು. ಅವಳ ಬೆವರು ಕೆಂಪಗಿರಲು ಕಾರಣ ಕುಂಕುಮ ಅಂದುಕೊಂಡಿದ್ದಳೇ ಹೊರತು ಬೆವರಿನ ಜತೆಗೆ ಕೆಂಪು ರಕ್ತ ಕಣ ಹರಿದು ಹೋಗುತ್ತಿದೆ ಎಂದು ಅವಳಿಗೆ ಗೊತ್ತಾಗಲಿಲ್ಲ. ರಕ್ತಕಣ ಬೆವರಿನ ಜತೆಗೆ ಕರಗಿ ಬರುವುದೆಂದು ಅವಳಿಗೆ ಹೇಗೆ ಗೊತ್ತಾಗಬೇಕು? ಗೊತ್ತಾದ ಮಾತ್ರಕ್ಕೆ ಅವಳು ಏನು ತಾನೇ ಮಾಡಿಯಾಳು?

ಹೆಂಡತಿಯ ಕಾಯಿಲೆಯಿಂದ ಅನಸೂಯಾಳ ಗಂಡನಿಗೆ ಯಾವುದೇ ಸಮಸ್ಯೆ ಆಗಲಿಲ್ಲ. ಆಷ್ಟೊತ್ತಿಗಾಗಲೇ ಹಿರಿಯ ಮಗನ ಮದುವೆ ಆಗಿ ಸೊಸೆ ಅಡುಗೆ ಮನೆಗೆ ಬಂದಾಗಿತ್ತು. ಗಂಡನನ್ನು ಕಳೆದುಕೊಂಡು ತವರು ಮನೆ ಸೇರಿದ್ದ ಆತನ ತಂಗಿ ದನಕರು ನೋಡಿಕೊಳ್ತಾ ಇದ್ದಳು. ದೇಹ ಚಪಲಕ್ಕೆ ಹೆಂಡತಿಯೇ ಆಗಬೇಕೆಂಬ ನಿಯಮವೇನೂ ಇಲ್ಲವಲ್ಲ! ಆದರೆ ಅವನಿಗೆ ತಲೆ ನೋವಾಗಿದ್ದು ಮಾತ್ರ ಮಗಳು ಕೃಷ್ಣವೇಣಿಯ ವರ್ತನೆ. ಅವನ ಹೆಂಡತಿ ಅನಸೂಯಾ ಕುಳ್ಳಿ, ತಿಳಿಗೇಡಿ ಆದರೂ ವಿನಯ, ವಿಧೇಯತೆ ಇದ್ದವಳು. ಕುಳ್ಳಕಿದ್ದರೂ ತಲೆ ಎತ್ತದ ಹಾಗೆ ಇಡೀ ಮನೆಯ ಚಾಕರಿ ಮಾಡುತ್ತಿದ್ದಳು. ಅವಳು ಬಾಯಿ ಬಿಟ್ಟು ಕೇಳದಿದ್ದರೆ ಏನಂತೆ, ಅವಳಿಗೆ ಬೇಕಾದ ಸೀರೆ, ಒಡವೆ ಎಲ್ಲಾ ಕೊಡಿಸುತ್ತಿದ್ದ! ಕೃಷ್ಣವೇಣಿಗೆ ತಾಯಿಯ ಲಕ್ಷಣ ಬಂದಿಲ್ಲ. ಕಂಬದ ಹಾಗೆ ಬೆಳೆದಿದ್ದಾಳೆ. ಮುಖಕ್ಕೆ ಮುಖ ಇಟ್ಟು ನೇರವಾಗಿ ಗಂಟೆ ಹೊಡೆದ ಹಾಗೆ ಮಾತಾಡ್ತಾಳೆ. ಶಾಲೆ ಬಿಡಿಸಿದರೆ ಸೊಕ್ಕು ಮುರಿಯುವುದೆಂಬ ಯಾರದೋ ಸಲಹೆಯಂತೆ ಹಾಗೆ ಮಾಡಿದ.

ಅದೊಂದು ದಿನ ಬೆಳಿಗ್ಗೆ ಅನಸೂಯಾ ಕಣ್ಣು ಮುಚ್ಚಿ ಮಗಳ ಸ್ಲೇಟು ಎದೆಯ ಮೇಲಿಟ್ಟುಕೊಂಡು ಮಲಗಿದ್ದಳು. ಗಂಡ ಹೊರಗೆ ಹೋಗುವವನಿದ್ದ. ಕೃಷ್ಣವೇಣಿ ಅಪ್ಪನ ಎದುರಿಗೆ ಬಂದು 'ಅಪ್ಪಾ ನನ್ನನ್ನು ಯಾಕೆ ಶಾಲೆ ಬಿಡಿಸಿದೀಯಾ?' ನಾನು ಇವತ್ತಿನಿಂದ ಹೋಗ್ತೇನೆ. ನನಗೆ ಮನೆಯಲ್ಲಿದ್ದು ಏನೂ ತೋಚುತ್ತಿಲ್ಲ.' ಅವನ ದೃಷ್ಟಿಗೆ ದೃಷ್ಟಿ ನೆಟ್ಟು ಕೇಳಿದಳು. ಅದೇಕೋ ಅವನಿಗೆ ಬೆನ್ನಿನಲ್ಲಿ ನಡುಕ ಹುಟ್ಟಿತು. ಕೂಡಲೇ ಕೋಪ ಬರಿಸಿಕೊಂಡು ಅವಳ ಕತ್ತಿನ ಹಿಂಭಾಗಕ್ಕೆ ಹಿಡಿದು ಬಾರಿಸಿದ. ಕೂಡಲೇ ಕೃಷ್ಣವೇಣಿಯ ತಲೆ ಅವಳ ಅಮ್ಮನ ಹಾಗೆ ಬಾಗಿ ಹೋಯಿತು.

ಏಟಿನ ಸದ್ದಿಗೆ ಕಣ್ಣು ತೆರೆದು ನೋಡಿದ ಅನಸೂಯಾ ಮಗಳ ತಲೆ ಇಳಿ ಬಿದ್ದಿರುವುದನ್ನು ನೋಡಿ ಗಾಬರಿಯಾಗಿ ಕಣ್ಣು ಮುಚ್ಚಿಕೊಂಡಳು. ಆಗ ಮುಚ್ಚಿದ ಕಣ್ಣು ತಿರುಗಿ ತೆರೆಯಲೇ ಇಲ್ಲ. ಎದೆಯ ಮೇಲೆ ಎರಡೂ ಕೈಯಿಂದ ಬಿಗಿದ ಸ್ಲೇಟಿನ ಜೊತೆಗೆ ಅವಳ ಅಂತ್ಯಕ್ರಿಯೆ ನಡೆಯಿತು.

ಬಾಗಿದ ತಲೆಯಿಂದ ಕೃಷ್ಣವೇಣಿಗೆ ನೋವು, ಅವಮಾನ ಅನಿಸುತ್ತಿತ್ತು. ತಲೆ ಎತ್ತಲು ಪದೇ ಪದೇ ಪ್ರಯತ್ನಿಸುತ್ತಿದ್ದಳು. ಎತ್ತಿದಾಗೊಮ್ಮೆ ನೋವು ತಾಳಲಾಗದೇ ಮುಖ ಕೆಳಗೆ ಹಾಕುತ್ತಿದ್ದಳು. ಹಾಗೆ ಎತ್ತುವುದು ಬಾಗುವುದು ಒಂದು ಚಟವಾಗಿಯೂ, ನೋಡುವವರ ಕಣ್ಣಿಗೆ ಅದೊಂದು ರೋಗ ಅನ್ನುವ ಹಾಗೆಯೂ ಬದಲಾಗಿಬಿಟ್ಟಳು.

ಎರಡು ವರ್ಷದ ನಂತರ ಗಿರೀಶನೊಂದಿಗೆ ಕೃಷ್ಣವೇಣಿಯ ಮದುವೆ ಆಯಿತು. ಅವನಿಗೆ ನಗರದಲ್ಲಿ ಯಾವುದೋ ಸಣ್ಣ ನೌಕರಿ. ಓದಿಕೊಂಡ ಹುಡುಗಿ